# ಕಾಕೂ ಊರ ಉಸಾಬರಿಗೆ ಮಂದಿ ಫಿದಾ

■ ಸ್ಮಿತಾ ಶಿರೂರ

'ಏಪವನ ತಿರುಪತಿಗೆ ಹೋಗಿ ಬಂದೀ ಏನ? ತಲಿ ಮರುಭೂಮಿ ಆದಂಗ ಆಗ್ಯದಲ್ಲ?' ಎನ್ನುತ್ತ ಎದುರಿಗೆ ಬಂದವನನ್ನು ಕಿಚಾಯಿಸುವ ಕಾಕೂನ ಊರ ಉಸಾಬರಿಗೆ ರೀಲ್ಸ್ ಪ್ರಿಯರೆಲ್ಲ ಫಿದಾ ಆಗಿದ್ದಾರೆ. ದಾರಿ ಬದಿ ಮಲಗಿದ ನಾಯಿಗೂ 'ಏಯ್ ಏಷ್ಟ ಮಕ್ಕೋತಿ ಏಳ' ಎಂಬ ಡೈಲಾಗ್ ಎಸೆದೇ ಮುಂದೆ ಸಾಗುವ ಕಾಕೂ ಪಾತ್ರವನ್ನು ಸೃಷ್ಟಿಸಿದ ಸೃಷ್ಟಿ ಜಹಗೀರದಾರ್, ವಿಜಯಪುರ ಜಿಲ್ಲೆಯವರು.

ನೈಟಿ ಧರಿಸಿ, ಸರಗಳ ರಾಶಿ ಹೇರಿಕೊಂಡು, ಎರಡೂ ಕಿವಿಗೆ ಬೇರೆ ಬೇರೆ ಓಲೆ ಹಾಕಿ ಇದೇ ಫ್ಯಾಷನ್ ಎಂದು ಆಡಂಬರ ಮಾಡುವ ಕಾಕೂನ ಬಾಯಿ ಎಂದರೆ ಬೊಂಬಾಯಿ. ಎದುರಿಗೆ ಸಿಕ್ಕವರೆಲ್ಲ, ಆಕೆಯ ಬಾಯಿಗೆ ಆಹಾರ. ನಮ್ಮ–ನಿಮ್ಮ ಸುತ್ತಲೂ ಇಂಥವರು ಇದ್ದಾರಲ್ಲ?, ನಮ್ಮ ಪಕ್ಕದ ಮನೆಯವರೇ, ತಲೆಯೆಲ್ಲ ಹರಟುತ್ತಾರಲ್ಲ? ಎಂದು ನೋಡುಗರು ಅಂದುಕೊಳ್ಳುವಷ್ಟು ಈ ಕಾಕೂ ರೀಲ್ಸ್‌ಗಳು ಜನರೊಂದಿಗೆ ಕನೆಕ್ಟ್ ಆಗಿವೆ.

ಸದ್ಯ ಬೆಂಗಳೂರಿನಲ್ಲಿ ನೆಲೆಸಿರುವ ಸೃಷ್ಟಿ ಮೊದಲು ಕಾರ್ಪೊರೇಟ್ ಕಂಪನಿಯೊಂದರಲ್ಲಿ ಉದ್ಯೋಗ ಮಾಡುತ್ತಿದ್ದರು. ಸಹೋದ್ಯೋಗಿ ತಮಿಳುನಾಡಿನ ಫ್ಯಾಬಿ ಜೊತೆ ಸುಮ್ಮನೆ ಇಂಗ್ಲಿಷ್‌ನಲ್ಲಿ ರೀಲ್ಸ್ ಹಾಗೂ ಸ್ಟ್ಯಾಂಡ್‌ಅಪ್ ಕಾಮಿಡಿ ಮಾಡುತ್ತಿದ್ದರು. ಒಮ್ಮೆ ಕನ್ನಡದಲ್ಲಿ ಒಂದು ರೀಲ್ ಮಾಡಿ ಜಾಲತಾಣದಲ್ಲಿ ಹಾಕಿದರು. ಅದಕ್ಕೆ ಭಾರಿ ಪ್ರತಿಕ್ರಿಯೆ ಬಂದವು. ಅಂದಿನಿಂದ ಕನ್ನಡದಲ್ಲೇ ಹೆಚ್ಚು ರೀಲ್ಸ್ ಮಾಡುತ್ತಿದ್ದಾರೆ ಸೃಷ್ಟಿ.

ರೀಲ್ಸ್ ಮಾಡುತ್ತಲೇ ಉತ್ತರ ಕರ್ನಾಟಕದ ಹಲವು ಯೂಟ್ಯೂಬ್ ಕಲಾವಿದರ ಪರಿಚಯವಾಗಿ ಅವರೊಂದಿಗೂ ರೀಲ್ಸ್ ಲೋಕ ಕಟ್ಟಿದ್ದಾರೆ. ಯೂಟ್ಯೂಬರ್ ಚೇತನ್ ಜೊತೆ 'ಮನೆ ಕೆಲಸದ ಶಾಹೀನ್ ಹಾಗೂ ಮಂಜು ಮೇಸ್ತ್ರಿ ಲವ್ ಸ್ಟೋರಿ' ಸರಣಿಗೆ ಅಭಿಮಾನಿ ಬಳಗವೇ ಇದೆ. ಶಾಹೀನ್‌ನ ಉರ್ದು ಮಿಶ್ರಿತ ಕನ್ನಡ, ಹಾವಭಾವಗಳನ್ನೂ ಪ್ರೇಕ್ಷಕರು ಮೆಚ್ಚಿದ್ದಾರೆ. ಕಲ್ಯಾಣಿ ಸೌದಿ ಜೊತೆ ಚಾಡಿಬುರ್ಕಿ ಮಾತುಕತೆಯಾಡುತ್ತ ಅವರಿವರ ಮನೆಯ ಕಥೆಗಳನ್ನು ಹಂಚಿಕೊಳ್ಳುವುದೂ ಮುದ ನೀಡುತ್ತದೆ. ಉಡಾಳ್ ಪವ್ಯಾ ಜೊತೆ ಗಂಡ ಹೆಂಡತಿ ಜಗಳ, ಜಾತಿ ನಾಯಿ ಬೀದಿ ನಾಯಿ ಸರಣಿಗಳೂ ಹೆಸರು ಮಾಡಿವೆ. ಕಾಕೂ ರೀಲ್ಸ್‌ಗಂತೂ ಮೆಚ್ಚುಗೆಯ ಮಳೆ. ವಾದಿರಾಜ ಬಬಲಾದಿ, ದಿಶಾ, ಸೂರಜ್ ಜೊತೆ ಇವರು ರೂಪಿಸಿರುವ ರೀಲ್‌ಗಳು ನಕ್ಕು ನಲಿಸುತ್ತವೆ. ಹೊಸ ಸೊಸೆಯ ಉಮೇದಿ, ಕನ್ಯಾ ಹುಡುಕಿ ಕೊಡುವ ಆಂಟಿ, ಊರ ಉಸಾಬರಿ ಮಾಡುವ ಕಾಕೂ, ಗಯ್ಯಾಳಿ ಪತ್ನಿ, ಆದರ್ಶ ಹೆಂಡತಿ, ಸದಾ ಉದ್ರಿ ಕೇಳುತ್ತ ಬರುವ ಪಕ್ಕದ ಮನೆ ಆಂಟಿ, ಮಕ್ಕಳನ್ನು ಕಂಟ್ರೋಲ್ ಮಾಡುವ ಸ್ಟ್ರಿಕ್ಟ್ ಅಮ್ಮ... ಹೀಗೆ ಅವರ ಪಾತ್ರಗಳಲ್ಲಿ ಮನರಂಜನೆಯ ಮಹಾಪೂರವೇ ಇದೆ.

ಮನೆಯ ಸುತ್ತಮುತ್ತ ಕಾಣುವ, ಕೇಳುವ ಹಾಸ್ಯ, ಮನರಂಜನೆಯ ತುಣುಕುಗಳು, ಘಟನೆಗಳು ಸೃಷ್ಟಿ ಮನಸಲ್ಲಿ ಸಿಲುಕಿ ರೀಲ್ಸ್‌ಗಳಾಗಿ ರೂಪುಗೊಂಡು ಹೊರಹೊಮ್ಮುತ್ತವೆ. ತಮ್ಮ ಊರಿನಿಂದ ಬಸ್ ಹತ್ತಿ ಹೊರಟರೆಂದರೆ, ಬಸ್‌ನ ಕಿಟಕಿ ಪಕ್ಕ ಕುಳಿತು ಮನಸ್ಸಿನಲ್ಲಿ ಅಂದುಕೊಳ್ಳುವ, ಬೈದುಕೊಳ್ಳುವ ಸ್ವಗತಗಳೂ ರೀಲ್ಸ್ ಆಗಿ ಸುಂದರ ರೂಪ ತಾಳಿವೆ. 'ಹೌದಲ್ಲ! ನಾವೂ ಹಿಂಗ ಅನ್ಕೋತಿವಲ್ಲ' ಎಂದು ಮೆಲುಕು ಹಾಕುವಂತಾಗುತ್ತದೆ.

ಮನುಷ್ಯನ ಸ್ವಭಾವಗಳ ವೈವಿಧ್ಯ, ಮಾತಿನ ಚಮತ್ಕಾರ, ವ್ಯಕ್ತಿತ್ವಗಳ ಭಿನ್ನತೆಗಳನ್ನು ಏಕವ್ಯಕ್ತಿ ಪ್ರದರ್ಶನವಾಗಿ ತೆರೆಗೆ ತಂದಿರುವ ಸೃಷ್ಟಿ ಕಳೆದ ಎರಡು ವರ್ಷಗಳಿಂದ ಯೂಟ್ಯೂಬ್, ಇನ್‌ಸ್ಟಾಗ್ರಾಂ ಕಂಟೆಂಟ್ ಕ್ರಿಯೇಟರ್, ಸ್ಟ್ಯಾಂಡ್‌ಅಪ್ ಕಾಮಿಡಿಯನ್ ಆಗಿ ಪೂರ್ಣವಾಗಿ ತೊಡಗಿಸಿಕೊಂಡಿದ್ದಾರೆ. ತಮ್ಮ ಈ ನಕ್ಕು ನಲಿಸುವ ಕಲೆಗಾಗಿ ಕಾರ್ಪೊರೇಟ್ ಉದ್ಯೋಗವನ್ನೂ ತೊರೆದು ದಿಟ್ಟ ಹಜ್ಜೆ ಇಟ್ಟಿದ್ದಾರೆ. ಯೂಟ್ಯೂಬ್, ಇನ್‌ಸ್ಟಾಗ್ರಾಂನಲ್ಲಿ ಅವರಿಗೆ 2.5 ಲಕ್ಷ ಫಾಲೋವರ್ಸ್ ಇದ್ದಾರೆ.

'ಗ್ರೂಪ್ ರೀಲ್ಸ್ ಆದರೆ ಎಲ್ಲರೂ ಕುಳಿತು ಚರ್ಚೆ ಮಾಡಿ ಸ್ಕ್ರಿಪ್ಟ್ ಸಿದ್ಧ ಮಾಡುತ್ತೇವೆ. ಹೆಚ್ಚು ಕಡಿಮೆ ಒಂದು ತಾಸಿನಲ್ಲಿ ಶೂಟಿಂಗ್ ಮುಗಿಯುತ್ತದೆ. ದಿನಕ್ಕೊಂದು ರೀಲ್ ಮಾಡಿ ಅಪ್‌ಲೋಡ್ ಮಾಡುವ ಗುರಿ ಇಟ್ಟುಕೊಂಡಿರುತ್ತೇನೆ. ಕೆಲವೊಮ್ಮೆ ಸಾಧ್ಯವಾಗುವುದಿಲ್ಲ. ನಾನು ಮಾಡಿರುವ ಬಹುತೇಕ ರೀಲ್ಸ್‌ಗೆ ಮೆಚ್ಚುಗೆ ಬಂದಿದೆ. ಕಾಕೂ ಪಾತ್ರಕ್ಕೆ ಹೆಚ್ಚಿನ ಸ್ಪಂದನೆಯಿದೆ. ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಾಗ 'ಹಾಯ್ ಕಾಕೂ' ಎಂದೇ ಮಾತನಾಡಿಸುತ್ತಾರೆ. ನನ್ನ ಪಾತ್ರಗಳು ಸಮಾಜದಲ್ಲಿ ಹೆಸರು ತಂದುಕೊಟ್ಟಿವೆ. ನನ್ನ ಪ್ರತಿಭೆಗೆ ಸೂಕ್ತ ವೇದಿಕೆ, ಆದಾಯ ಎರಡೂ ದೊರಕುತ್ತಿರುವುದೂ ಖುಷಿಯ ಸಂಗತಿ' ಎನ್ನುತ್ತಾರೆ ಸೃಷ್ಟಿ.

ವಿಜಯಪುರದ ಸೇವಾ ಅಕಾಡೆಮಿ ಶಾಲೆಯಲ್ಲಿ ಪ್ರಾಥಮಿಕ ಪ್ರೌಢಶಿಕ್ಷಣ, ಪಿಡಿಜೆ ಕಾಲೇಜಿನಲ್ಲಿ ಪಿಯು ಶಿಕ್ಷಣ, ಪುಣೆಯಲ್ಲಿ ಪತ್ರಿಕೋದ್ಯಮ ಪದವಿ ಪಡೆದಿದ್ದಾರೆ. ಕೆಎಸ್‌ಆರ್‌ಟಿಸಿ ಉದ್ಯೋಗಿಯಾಗಿರುವ ಅಮ್ಮ ಸುಚೇತಾ ಹಾಗೂ ಪದವಿ ಓದುತ್ತಿರುವ ತಮ್ಮನೊಂದಿಗಿನ ಪುಟ್ಟ ಪರಿವಾರದ ಪೂರ್ಣ ಪ್ರೋತ್ಸಾಹದಿಂದ ರೀಲ್ಸ್ ದುನಿಯಾದಲ್ಲಿ ಜನರನ್ನು ನಗಿಸಿ ಮನಸ್ಸು ಹಗುರ ಮಾಡಿಸುತ್ತಾರೆ ಇವರು. ■

**ಕಾರ್ಪೊರೇಟ್ ಉದ್ಯೋಗ ತೊರೆದು ಜನರನ್ನು ನಕ್ಕು ನಗಿಸಲು ರೀಲ್ಸ್ ಲೋಕಕ್ಕೆ ಕಾಲಿಟ್ಟ ವಿಜಯಪುರದ ಸೃಷ್ಟಿ ಜಹಗೀರದಾರ್, 'ಕಾಕೂ' ಎಂದೇ ಪರಿಚಿತರು. ವಿವಿಧ ಪಾತ್ರಗಳೊಂದಿಗೆ ಮನರಂಜನೆಯ ಮಹಾಪೂರವನ್ನೇ ಹರಿಸುವವರು...**

